ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ ದಿನಾಂಕ ೨೦ನೇ ಮಾರ್ಚ್ ೧೯೮೪ ಆಶ್ವಯುಜ ೨೩, ೧೯೦೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೪ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್)ಅವರು ಪೀಠವನ್ನು ಅಲಂಕರಿಸಿದ್ದರು.]

ಸಂತಾಪ ಸೂಚನಾ ನಿರ್ಣಯ

ಸಭಾಧ್ಯಕ್ಷರು.—

೧. ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಹಾಗೂ ರಾಜಸ್ಥಾನದ ರಾಜ್ಯಪಾಲರಾಗಿದ್ದ ೪೦ ವರ್ಷಗಳ ಕಾಲ ರಾಜ್ಯದ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸಿದ್ದ ಶ್ರೀ ವಸಂತದಾದ ಪಾಟೀಲರವರು ದಿನಾಂಕ ೧ನೇ ಮಾರ್ಚ್, ೧೯೮೪ರಂದು ನಿಧನರಾದರು. ಮಾನ್ಯರು ೧೯೪೨ರಲ್ಲಿ ನಡದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು ಹಾಗೂ ಸಹಕಾರ ಚಳುವಳಿಯಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಿದ್ದರು. ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ನೀರಾವರಿ ಹಾಗೂ ವಿದ್ಯುತ್ ಖಾತೆಯ ಸಚಿವರಾಗಿದ್ದರು. ಆವರು ನಾಲ್ಕು ಬಾರಿ ಮಹಾರಾಷ್ಟ್ರದ ಮುಖ್ಯ ಮಂತ್ರಿಯಾಗಿದ್ದರು ಹಾಗೂ ದಕ್ಷ ಆಡಳಿತಗಾರರಾಗಿದ್ದರು. ಜನವರಿ, ೧೯೮೦ರಲ್ಲಿ ಲೋಕಸಭೆಗೆ ಸಾಂಗ್ಲಿಯಿಂದ ಚುನಾಯಿತರಾಗಿದ್ದರು.

೨. ಪೂರ್ವ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಸುಭಾಷ್‌ಚಂದ್ರ ಬಿ. ಪಾಟೀಲ್ ಅವರು ದಿನಾಂಕ ೭ನೇ ಅಕ್ಟೋಬರ್, ೧೯೮೪ರಂದು ನಿಧನರಾದರು. ಮಾನ್ಯರು ಏಳನೆ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೩. ಪೂರ್ವ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಹೆಚ್. ಮಾರೇಗೌಡರು ದಿನಾಂಕ ೫ನೇ ಮಾರ್ಚ್ ೧೯೮೪ರಂದು ನಿಧನರಾದರು. ಮಾನ್ಯರು ಐದನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೪. ಮಾಜಿ ಪ್ರಜಾಪ್ರತಿನಿಧಿ ಸದಸ್ಯರಾಗಿದ್ದ ಶ್ರೀ ಪೈ. ವಿ. ಕುಮಾರಯ್ಯ ಅವರು ದಿನಾಂಕ ೮ನೇ ಜನವರಿ, ೧೯೮೪ರಂದು ನಿಧನರಾದರು. ಮಾನ್ಯರು ೧೯೪೧ ರಿಂದ ೧೯೪೫ರವರೆಗೆ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಈ ಬಗ್ಗೆ ಯಾರಾದರೂ ಮಾನ್ಯ ಸದಸ್ಯರುಗಳು ಮಾತನಾಡುವುದಿದ್ದರೆ ಮಾತನಾಡಬಹುದು.

"ನಿಧನ ಹೊಂದಿದ ಮಾನ್ಯ ಸದಸ್ಯರುಗಳ ಗೌರವಾರ್ಥವಾಗಿ ಸದನವು ಒಂದು ನಿಮಿಷಕಾಲದ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ"

(ಸದನವು ಒಂದು ನಿಮಿಷ ಕಾಲದ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ನಿಧನ ಹೊಂದಿದ ಮಾನ್ಯ ಸದಸ್ಯರುಗಳ ಕುಟುಂಬದವರಿಗೆ ಸದನದ ಸಂತಾಪ ಸೂಚಕ ನಿರ್ಣಯವನ್ನು ಕಳುಹಿಸಿಕೊಡಲಾಗುವುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಈ ಬಜೆಟ್ ಎಂದು ಹೇಳುವ ಒಂದು ರಿಪೋರ್ಟ್‌ನ್ನು ಇಲ್ಲಿ ಪ್ರೆಸೆಂಟ್ ಮಾಡುವುದಕ್ಕೆ ಮುಂಚೆ ನಾನು ತಮ್ಮ ಗಮನ ಸೆಳೆಯುವುದಕೆ ಪ್ರಯತ್ನ ಪಟ್ಟಿದ್ದೆ. ....